## ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405–00–101–0–03)

**ಅ) ಮೀನುಮರಿ ಉತ್ಪಾದನೆ, ಪಾಲನೆ ಹಾಗೂ ವಿತರಣೆ**

ಮೀನುಮರಿ ಉತ್ಪಾದನೆ, ಪಾಲನೆ ಹಾಗೂ ವಿತರಣೆಗೆ ಬೇಕಾಗುವ ಆಹಾರ, ಗೊಬ್ಬರ ಸಲಕರಣೆಗಳನ್ನು ಪಡೆಯಲು, ಉತ್ಪಾದನಾ ಕೇಂದ್ರಗಳಿಂದ ಶೇಖರಣಾ ಸ್ಥಳಗಳಿಗೆ ಸಾಗಿಸುವ ಮತ್ತು ಕೇಂದ್ರ ಕಛೇರಿಯ ವಾಹನಗಳ ನಿರ್ವಹಣೆ, ಮೀನುಗಾರಿಕೆ ಉತ್ಪಾದನಾ ಕೇಂದ್ರಗಳಿಗೆ ವಾಹನ ಖರೀದಿ ಮತ್ತು ನಿರ್ವಹಣೆ ಹಾಗೂ ಖಾಸಗಿಯವರಿಂದ ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸುವ ವೆಚ್ಚವನ್ನು ಭರಿಸಲಾಗುವುದು. ದೋಷಪೂರಿತ ಕೊಳಗಳ ದುರಸ್ಥಿ ನಿರ್ವಹಣೆ ಮತ್ತು ಉಪಯೋಗದಲ್ಲಿರುವ ಕೊಳಗಳ ವಾರ್ಷಿಕ ನಿರ್ವಹಣೆಗೂ ಅವಕಾಶ ಕಲ್ಪಿಸಲಾಗಿದೆ.

**ಆ) ಮತ್ಸಧಾಮಗಳ ಅಭಿವೃದ್ಧಿ**

ಈ ಯೋಜನೆಯಡಿ ರಾಜ್ಯದಲ್ಲಿ ಗುರುತಿಸಲಾದ ಮತ್ಸಧಾಮಗಳ ಅಭಿವೃದ್ಧಿಯನ್ನು ಹಾಗೂ ವಿನಾಶದ ಅಂಚಿನಲ್ಲಿರುವ ಸ್ಥಳೀಯ ಮೀನು ತಳಿಗಳ ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

### ಮೀನುಮರಿ ಖರೀದಿಸಲು ಸಹಾಯ (2405–00–101–0–28)

ಮೀನುಗಾರಿಕೆ ಇಲಾಖೆಯ, ಜಿಲ್ಲಾ ಪಂಚಾಯತ್,ಮೀನುಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲದೆ, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ(ನಿ), ಮೈಸೂರಿನ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಆದರೆ ವ್ಯಕ್ತಿಗತ ಗರಿಷ್ಠ ರೂ.5000/– ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20.000/– ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು.

### ವಿಶೇಷ ಘಟಕ ಯೋಜನೆ (2405–00–789–0–03)

ಪರಿಶಿಷ್ಠ ಜಾತಿಯ ಫಲಾನುಭವಿಗಳ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲು ಪ್ರಸ್ತಾವಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ. | ಯೋಜನೆ | ಆರ್ಥಿಕ ಸಹಾಯ |
|---|---|---|
| 1. | ಮೀನುಗಾರರ ಮಹಿಳೆಯರಿಗೆ ಮೀನು ಮಾರಾಟಕ್ಕಾಗಿ ಸಲಕರಣೆ ಖರೀದಿಸಲು ಸಹಾಯ.(ಐಸ್ ಬಾಕ್ಸ್ ಮತ್ತು ಶಾಖನಿರೋಧಕ ಕ್ರೇಟ್‌ಗಳು) | ಮೀನುಗಾರರ ಮಹಿಳೆಯರಿಗೆ ಮೀನು ಮಾರಾಟಕ್ಕಾಗಿ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚ ರೂ.5000/–ಗಳನ್ನು ಶೇ.100ರಷ್ಟು ಸಹಾಯಧನವಾಗಿ ನೀಡಲಾಗುವುದು. |
| 2. | ಮೀನುಗಾರರ ಮಹಿಳೆಯರಿಗೆ ಮೀನು ಸಂಸ್ಕರಣೆಗಾಗಿ ಬೇಕಾಗುವ ಸಲಕರಣೆ ಸಹಾಯಧನ | ಮೀನುಗಾರರ ಮಹಿಳೆಯರಿಗೆ ಮೀನು ಸಂಸ್ಕರಣೆಗಾಗಿ ಬೇಕಾಗುವ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚ ರೂ.5000/–ಗಳನ್ನು ಶೇ.100ರಷ್ಟು ಸಹಾಯಧನವಾಗಿ |

| | | |
|---|---|---|
| | | ನೀಡಲಾಗುವುದು |
| 3. | ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಅಗತ್ಯ ಸಲಕರಣೆಗಳನ್ನು ಖರೀದಿಸಲು ಸಹಾಯ | ಮೀನುಗಾರಿಕೆ ಕೈಗೊಳ್ಳಲು ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳನ್ನು ನೀಡಲಾಗುವುದು.ಓರ್ವ ಮೀನುಗಾರನಿಗೆ ಗರಿಷ್ಟ ರೂ.5,000/- ಮೊತ್ತದ ಮೀನು ಹಿಡಿಯುವ ಬಲೆ ಮತ್ತು ಪೂರಕ ಸಾಮಗ್ರಿಗಳನ್ನು "ಕಿಟ್" ರೂಪದಲ್ಲಿ ನೀಡಲಾಗುವುದು. |
| 4. | ಪರಿಶಿಷ್ಠ ಜಾತಿ ಮೀನುಗಾರರ ಸಹಕಾರಿ ಸಂಘಗಳಿಗೆ ದುಡಿಮೆ/ಷೇರು ಬಂಡವಾಳ ನೀಡುವುದು. | ಪರಿಶಿಷ್ಟ ಜಾತಿ ಮೀನುಗಾರರ ಸಹಕಾರಿ ಸಂಘಗಳಿಗೆ ದುಡಿಮೆ/ಷೇರು ಬಂಡವಾಳ ನೀಡಲಾಗುವುದು. |
| 5. | ಮೀನುಮರಿ ಖರೀದಿಗಾಗಿ ಸಹಾಯ | ಮೀನುಗಾರಿಕೆ ಇಲಾಖೆಯ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳು, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ(ನಿ), ಮೈಸೂರಿನ ಫಾರಂಗಳು ಹಾಗೂ ಮೀನುಗಾರಿಕೆ ಇಲಾಖೆಯು ಅನುಮೋದಿಸಿದ ಖಾಸಗಿ ಮೀನುಮರಿ ಕೇಂದ್ರಗಳಿಂದ ಖರೀದಿಸಿದ, ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.75 ರಷ್ಟು ಆದರೆ ವ್ಯಕ್ತಿಗತ ಗರಿಷ್ಟ ರೂ.15,000/- ಗಳ ಸಹಾಯ ಧನವನ್ನು ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಟ ರೂ.30,000/-ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. |

## ಗಿರಿಜನ ಪ್ರದೇಶ ಉಪಯೋಜನೆ (2405-00-796-0-00)

ಪರಿಶಿಷ್ಟ ಪಂಗಡದ ಫಲಾನುಭವಿಗಳ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ. | ಘಟಕ | ಷರಾ |
|---|---|---|
| 1. | ಮೀನುಗಾರರ ಮಹಿಳೆಯರಿಗೆ ಮೀನು ಮಾರಾಟಕ್ಕಾಗಿ ಸಲಕರಣೆ ಖರೀದಿಸಲು ಸಹಾಯ | ಮೀನುಗಾರರ ಮಹಿಳೆಯರಿಗೆ ಮೀನು ಮಾರಾಟಕ್ಕಾಗಿ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚ ರೂ.5000/- ಗಳನ್ನು ಶೇ.100 ರಷ್ಟು ಸಹಾಯಧನವಾಗಿ ನೀಡಲಾಗುವುದು. |
| 2. | ಮೀನುಗಾರರ ಮಹಿಳೆಯರಿಗೆ ಮೀನು ಸಂಸ್ಕರಣೆಗಾಗಿ ಬೇಕಾಗುವ ಸಲಕರಣೆ | ಮೀನುಗಾರರ ಮಹಿಳೆಯರಿಗೆ ಮೀನು ಸಂಸ್ಕರಣೆಗಾಗಿ ಬೇಕಾಗುವ ಸಲಕರಣೆಗಳನ್ನು |

| | | |
|---|---|---|
| | ಸಹಾಯಧನ | ಖರೀದಿಸಲು ಘಟಕ ವೆಚ್ಚ ರೂ.5000/- ಗಳನ್ನು ಶೇ.100ರಷ್ಟು ಸಹಾಯಧನವಾಗಿ ನೀಡಲಾಗುವುದು. |
| 3. | ಮೀನುಗಾರರಿಗೆ ಮೀನುಗಾರಿಕೆಗೆ ಬೇಕಾದ ಅಗತ್ಯ ಸಲಕರಣೆಗಳನ್ನು ಖರೀದಿಸಲು ಸಹಾಯ | ಮೀನುಗಾರಿಕೆ ಕೈಗೊಳ್ಳಲು ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳನ್ನು ನೀಡಲಾಗುವುದು.ಓರ್ವ ಮೀನುಗಾರನಿಗೆ ಗರಿಷ್ಟ ರೂ.5,000/- ಮೊತ್ತದ ಮೀನು ಹಿಡಿಯುವ ಬಲೆ ಮತ್ತು ಪೂರಕ ಸಾಮಗ್ರಿಗಳನ್ನು "ಕಿಟ್"ರೂಪದಲ್ಲಿ ನೀಡಲಾಗುವುದು. |
| 4. | ಮೀನುಮರಿ ಖರೀದಿಗಾಗಿ ಸಹಾಯ | ಮೀನುಗಾರಿಕೆ ಇಲಾಖೆಯ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳು, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ(ನಿ), ಮೈಸೂರಿನ ಫಾರಂಗಳು ಹಾಗೂ ಮೀನುಗಾರಿಕೆ ಇಲಾಖೆಯು ಅನುಮೋದಿಸಿದ ಖಾಸಗಿ ಮೀನುಮರಿ ಕೇಂದ್ರಗಳಿಂದ ಖರೀದಿಸಿದ, ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.75 ರಷ್ಟು ಆದರೆ ವ್ಯಕ್ತಿಗತ ಗರಿಷ್ಟ ರೂ.15,000/- ಗಳ ಸಹಾಯಧನವನ್ನು ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಟ ರೂ.30.000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. |

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ**

ಕೇಂದ್ರದ ನೆರವಿನ ರಾಷ್ಟ್ರಿಯ ಕೃಷಿ ವಿಕಾಸ ಯೋಜನೆಯನ್ನು 2007-08 ನೇ ಸಾಲಿನಿಂದ ರಾಷ್ಟ್ರದ ಎಲ್ಲಾ ಕೃಷಿಕರ ಅವಶ್ಯಕತೆಗಳನ್ನು/ಬೇಡಿಕೆಗಳನ್ನು ಈಡೇರಿಸಲು/ ಬಗೆಹರಿಸಲು ಜಾರಿಗೆ ತರಲಾಯಿತು. ಸದರಿ ಯೋಜನೆಯನ್ನು ಕೃಷಿ ಮತ್ತು ಸಂಬಂಧಿಸಿದ ಇತರೆ ವಲಯಗಳ ಸಮಗ್ರವಾದ ಅಭಿವೃದ್ಧಿಗಾಗಿ ಜಾರಿಗೆ ತರಲಾಗಿದೆ.

ಸದರಿ ಯೋಜನೆಯಡಿ ಕೇಂದ್ರದ ನೆರವನ್ನು ಪಡೆಯಲು ಮೀನುಗಾರಿಕೆ ಇಲಾಖೆಯು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ,ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ಅಭಿವೃದ್ಧಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಹಾಗೂ ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರುರವರ ಒಳನಾಡು ಮೀನುಗಾರಿಕೆ ವಿಭಾಗದ ಸಹಯೋಗದೊಂದಿಗೆ ರೂ.52.89 ಕೋಟಿಗಳ ಯೋಜನಾ ವರದಿಯನ್ನು ತಯಾರಿಸಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅನುಷ್ಟಾನಕ್ಕಾಗಿ ರಚಿಸಲಾದ ರಾಜ್ಯಮಟ್ಟದ ಅನುಮೋದನಾ ಸಮಿತಿಯ ಅನುಮೋದನೆಯನ್ನು ಪಡೆಯಲಾಗಿದೆ.

ಸದರಿ ಯೋಜನೆಯಡಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

| ಕ್ರ.ಸಂ. | ಯೋಜನೆ | ಅನುಷ್ಠಾನ ಸಂಸ್ಥೆ |
|---|---|---|
| 1. | ಮೀನುಮರಿ ಉತ್ಪಾದನಾ ಕೇಂದ್ರಗಳ ಬಲವರ್ಧನೆ | ಮೀನುಗಾರಿಕೆ ಇಲಾಖೆ |
| 2. | ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ ಸ್ಥಾಪನೆ ಹಾಗೂ ಮೀನು ಉತ್ಪಾದನೆ ಹೆಚ್ಚಿಸುವ ತಂತ್ರಾಂಶಗಳ ಅಭಿವೃದ್ಧಿ | ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ |
| 3. | ಮೀನು ಮಾರುಕಟ್ಟೆ ಬಲಪಡಿಸುವಿಕೆ | ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು |
| 4. | ಮತ್ಸ್ಯ ಕೃಷಿ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವುದು. | ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ, ಬೆಂಗಳೂರು |

**ಸಂಕಷ್ಟ ಪರಿಹಾರ ನಿಧಿ (2405–00–103–0–15)**

ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರಿಗೆ ಮತ್ತು ಅವರ ಅವಲಂಬಿತರಿಗೆ, ಅಪಘಾತಕ್ಕೀಡಾಗುವ ಮೀನುಗಾರರಿಗೆ ಅವರ ತುರ್ತಿನ ಸಮಯದಲ್ಲಿ ನೆರವು ನೀಡಲು ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯನ್ನು ಸ್ಥಾಪಿಸಿರುತ್ತದೆ. ದಿನಾಂಕ:27–1–97 ರಂದು ನಡೆದ ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಸಭೆಯು ಮೀನುಗಾರಿಕೆ ನಡೆಸುವ ಸಂದರ್ಭಗಳಲ್ಲದೆ ಇತರೆ ಸಂದರ್ಭಗಳಲ್ಲಿಯೂ ಅಂದರೆ ಸ್ವಾಭಾವಿಕ ಮರಣ ಹಾಗೂ ರಸ್ತೆ ಅಪಘಾತ ಪ್ರಕರಣಗಳಲ್ಲಿಯೂ ಮೀನುಗಾರರು ಮೃತರಾದರೆ, ಮೃತರ ವಾರಸುದಾರರಿಗೆ ಕನಿಷ್ಟ ರೂ. 1000/– ಗಳಿಂದ 1500/– ಗಳವರೆಗೆ ಪರಿಹಾರ ನೀಡುತ್ತಿರುವುದನ್ನು ಸಂತ್ರಸ್ಥರು ಮೀನುಗಾರರೆಂಬುದನ್ನು ದೃಢಪಡಿಸಿಕೊಂಡು ಅದಕ್ಕನುಗುಣವಾಗಿ ಕನಿಷ್ಟ ರೂ.12,500/– ಗಳ ಪರಿಹಾರ ನೀಡಬಹುದೆಂದೂ ದಿನಾಂಕ : 5–7–2006 ರ ಸಭೆ ನಿರ್ಣಯಿಸಿರುತ್ತದೆ.

ದಿನಾಂಕ : 5–7–2006 ರಂದು ನಡೆದ ಕರ್ನಾಟಕ ರಾಜ್ಯ ಮೀನುಗಾರಿಕೆ ಸಂಕಷ್ಟ ಪರಿಹಾರ ನಿಧಿ ಸಮಿತಿ ಸಭೆಯು ಮರಣ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ರೂ.50,000/– ಗಳ ಪರಿಹಾರವನ್ನು ಮಂಜೂರು ಮಾಡಲು ನಿರ್ಣಯಿಸಿದೆ. ಇದು ದಿನಾಂಕ : 1–4–2006 ರಿಂದ ಅನ್ವಯವಾಗುತ್ತಿದ್ದು, ಅಂತಹ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ರೂ.12,500/– ಗಳ ಪರಿಹಾರವನ್ನು ಮಾತ್ರ ಮಂಜೂರು ಮಾಡಬಹುದಾಗಿದೆ.

ಬೆಂಕಿ ಆಕಸ್ಮಿಕಗಳಲ್ಲಿ ನಾಶವಾಗುವ ಮೀನುಗಾರಿಕೆ ಉಪಕರಣಗಳಿಗೆ ಮಾತ್ರ ಒಟ್ಟು ನಷ್ಟವನ್ನು ಪರಿಗಣಿಸಿ, ಕೊಡಬಹುದಾದ ಪರಿಹಾರವನ್ನು ಸಭೆಯಲ್ಲಿ ನಿರ್ಣಯಿಸಲಾಗುವುದು. ಮೀನುಗಾರಿಕೆಯಲ್ಲಿ ತೊಡಗಿದಾಗ ಸಂಭವಿಸಿದ ಅಪಘಾತದಿಂದ ಉಂಟಾಗುವ ಶಾರೀರಿಕ ತೊಂದರೆಗೆ

ಚಿಕಿತ್ಸೆ ಪಡೆಯಲು ತಗುಲಿದ ವೈದ್ಯಕೀಯ ವೆಚ್ಚವನ್ನು ದೃಢೀಕರಿಸಿಕೊಂಡು ಶೇ.50 ರಷ್ಟು ಅಥವಾ ಗರಿಷ್ಟ ರೂ.5,000/- ಗಳ ಪರಿಹಾರವನ್ನು ನೀಡಲಾಗುತ್ತಿದೆ. ಮತ್ಸ್ಯ ಸಂಪತ್ತಿನ ನಷ್ಟದ ಪ್ರಕರಣಗಳಲ್ಲಿ ನಷ್ಟವಾದ ಸಂಪತ್ತಿನ ನಿಖರವಾದ ಮೌಲ್ಯವನ್ನು ಅಂದಾಜು ಮಾಡುವುದು ಸಾಧ್ಯವಾಗದ ಕಾರಣ ಇಂತಹ ಪ್ರಕರಣಗಳನ್ನು ಪರಿಹಾರಕ್ಕಾಗಿ ಪರಿಗಣಿಸಲಾಗುವುದಿಲ್ಲ.

ಮೀನುಗಾರರು ಅಪಘಾತಗಳಿಂದ ಮೀನುಗಾರಿಕಾ ಸಲಕರಣೆಗಳನ್ನು ಕಳೆದುಕೊಂಡಲ್ಲಿ ಹಾಗೂ ಹಾನಿಗೊಳಗಾದ ಸಂದರ್ಭದಲ್ಲಿ ಸಂತ್ರಸ್ಥರಿಗೆ ಖರೀದಿಸುವಾಗ ಇದ್ದ ಮೌಲ್ಯ, ಖರೀದಿಸಿದ ದಿನಾಂಕದಿಂದ ನಷ್ಟವಾದ ದಿನಾಂಕದವರೆಗೆ ಪ್ರತಿ ವರ್ಷದ ಸವಕಳಿ(ಡಿಪ್ರಿಸಿಯೇಶನ್)ಯನ್ನು ಒಟ್ಟು ಮೌಲ್ಯದಲ್ಲಿ ಕಳೆದ ನಂತರ ಬರುವ ಮೌಲ್ಯವನ್ನು ಅಂದರೆ ಗರಿಷ್ಟ ರೂ.10,000/- ಗಳವರೆಗೆ ಪರಿಹಾರ ನೀಡಬಹುದಾಗಿದೆ.

## ಮತ್ಸ್ಯಾಶ್ರಯ ಯೋಜನೆ (2405-00-800-0-20)

ನಿರ್ವಸತಿ ಮೀನುಗಾರರಿಂದ ಮನೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಅವರ ಬೇಡಿಕೆಗಳನ್ನು ಪೂರೈಸಲು 2006-07 ನೇ ಸಾಲಿನಿಂದ "ಮತ್ಸ್ಯಾಶ್ರಯ" ಯೋಜನೆಯನ್ನು ರಾಜ್ಯ ಸರ್ಕಾರದಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಯೋಜನೆಯನ್ನು ರಾಜ್ಯ ಸರ್ಕಾರದಿಂದ ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ತಲಾ ರೂ.40,000 ಘಟಕ ವೆಚ್ಚದಲ್ಲಿ 5,000 ಮನೆಗಳನ್ನು ನಿರ್ಮಿಸಲಾಗುತ್ತಿದೆ.

## ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆ(2405-00-800-0-19)

ಮೀನುಗಾರ ಮಹಿಳೆಯರು ಮೀನು ಒಣಗಿಸುವ ಕಾರ್ಯದಲ್ಲಿ, ಮೀನು ಸಂಸ್ಕರಣೆ, ಮೀನು ಮಾರಾಟ ಹಾಗೂ ಸ್ಥಳೀಯ ಮೀನು ವ್ಯಾಪಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿಕೊಂಡಿರುತ್ತಾರೆ. ಹಿಡುವಳಿಯ ಪ್ರತಿ ಘಟಕ ವೆಚ್ಚದ ಹೆಚ್ಚಳದಿಂದ ಹಾಗೂ ಸಾಂಪ್ರದಾಯಿಕ ದೋಣಿಗಳ ಹಿಡುವಳಿಯು ಕಡಿಮೆಯಾಗಿರುವುದರಿಂದ ಈ ಮಹಿಳೆಯರು ತಮ್ಮ ದಿನ ನಿತ್ಯದ ವ್ಯಾಪಾರಕ್ಕೆ ಖಾಸಗಿ ವ್ಯಕ್ತಿಗಳಿಂದ ಹಣ ಸಾಲ ಮಾಡುತ್ತಾರೆ. ಇದನ್ನು ತಡೆಯಲು ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಯಡಿ ಸ್ವಸಹಾಯ ಗುಂಪಿಗೆ ದುಡಿಯುವ ಬಂಡವಾಳವನ್ನಾಗಿ ಗರಿಷ್ಟ ತಲಾ ರೂ.20,000/- ಗಳ ಆವರ್ತಕ ನಿಧಿ ನೀಡಲಾಗುತ್ತಿದೆ.

### ಅ) ಮೀನು ಮಾರಾಟ

ಮೀನು ಮತ್ತು ಮೀನು ಉತ್ಪನ್ನಗಳ ಮಾರಾಟದಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಮೀನು ಹಿಡುವಳಿಯ ವೆಚ್ಚ ಹೆಚ್ಚುತ್ತಿದ್ದು ಸಾಂಪ್ರದಾಯಿಕ ದೋಣಿಗಳಲ್ಲಿ ಹಿಡಿಯಲಾಗುತ್ತಿರುವ ಮೀನಿನ ಪ್ರಮಾಣ ಕಡಿಮೆಯಾಗುತ್ತಿದ್ದು, ದೈನಂದಿನ ವ್ಯವಹಾರಕ್ಕಾಗಿ ಮೀನು ಮಾರಾಟದಲ್ಲಿ ತೊಡಗಿರುವ ಮಹಿಳೆಯರು ಖಾಸಗಿ ಬಂಡವಾಳದಾರರಿಂದ ಸಾಲ ಪಡೆಯುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಘಟಕದಲ್ಲಿ ದೈನಂದಿನ ವ್ಯವಹಾರಗಳಿಗೆ ಅಗತ್ಯವಿರುವ ಆರ್ಥಿಕ ಸಹಾಯವನ್ನು ಮಹಿಳೆಯರಿಗೆ ನೀಡಲು ಯೋಜಿಸಿದೆ. ಒಬ್ಬ ಮಹಿಳೆಗೆ ರೂ.5000/- ಗಳನ್ನು ಆವರ್ತಕ ನಿಧಿಯಾಗಿ ಅನುಷ್ಟಾನಗೊಳಿಸುವ ಸಂಸ್ಥೆಯ ಮುಖಾಂತರ ನೀಡಲಾಗುವುದು.

### ಆ) ಹಿಡುವಳಿ ನಂತರ ಚಟುವಟಿಕೆಗಳು

ಹಿಡುವಳಿ ಅನಂತರದ ಚಟುವಟಿಕೆಯು ಒಂದು ಸಂಕೀರ್ಣ ವ್ಯವಸ್ಥೆ ಇದ್ದು, ಹರಾಜುದಾರರು, ಸಂಸ್ಕರಣಾಗಾರರು, ಮೀನು ಮಾರಾಟಗಾರರು, ಸಾಗಾಣಿಕೆದಾರರು, ಸಗಟು ಮತ್ತು

ಚಿಲ್ಲರೆ ವ್ಯಾಪಾರಿಗಳ ಒಂದು ದೊಡ್ಡ ಜಾಲವಾಗಿದೆ. ಹಿಡುವಳಿ ಅನಂತರದ ಮೀನು ಸಂಸ್ಕರಣೆ,ಉಪ್ಪು ಹಾಕಿ ಒಣಗಿಸುವುದು, ಫಿಶ್ ಸೈಲೇಜ್ ಮತ್ತು ಮೀನಿನ ಗೊಬ್ಬರ ಉತ್ಪಾದನೆ, ಮೀನಿನ ಎಣ್ಣೆ ತೆಗೆಯುವುದು, ಉಪ್ಪಿನಕಾಯಿ ತಯಾರಿಸುವುದು ಮುಂತಾದವು ಪ್ರಮುಖ ಪಾತ್ರ ಚಟುವಟಿಕೆಗಳಾಗಿರುತ್ತವೆ. ಈ ಎಲ್ಲಾ ಚಟುವಟಿಕೆಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಈ ಚಟುವಟಿಕೆಗಳನ್ನು ಕೈಗೊಳ್ಳಲು ಬಂಡವಾಳ ಹಾಗೂ ಕಚ್ಚಾವಸ್ತು ಲಭ್ಯತೆ ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸುವುದು ಅತ್ಯಗತ್ಯ. ಈ ಘಟಕದಲ್ಲಿ ಹೂಡಿಕೆಯ ಬಂಡವಾಳಕ್ಕಾಗಿ ಪ್ರತಿ ಮಹಿಳೆಗೆ ರೂ.5000/- ರಂತೆ ಸಹಾಯ ನೀಡಲು ಯೋಜಿಸಲಾಗಿದೆ.

**ಇ) ಒಳನಾಡು ಪ್ರದೇಶಗಳಲ್ಲಿ ಮೀನುಗಾರಿಕೆ ಸಲಕರಣೆಗಳ ಖರೀದಿಗಾಗಿ ಮತ್ತು ಮೀನು ಮಾರಾಟಕ್ಕಾಗಿ ಸಹಾಯ :-**

ರಾಜ್ಯದಲ್ಲಿ ವಿಪುಲ ಒಳನಾಡು ಜಲಸಂಪನ್ಮೂಲಗಳಿದ್ದು ಮೀನು ಉತ್ಪಾದನೆಗೆ ಉತ್ತಮ ಅವಕಾಶವನ್ನು ಒದಗಿಸಿವೆ. ಒಳನಾಡು ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಿರುವ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳ ಖರೀದಿ ಮತ್ತು ಮೀನು ಮಾರಾಟಕ್ಕಾಗಿ ಆರ್ಥಿಕ ಸಹಾಯ ನೀಡಲು ಯೋಜಿಸಿದೆ. ಈ ಘಟಕದಡಿ ಪ್ರತಿ ಮಹಿಳೆಗೆ ರೂ.5,000/- ಆವರ್ತಕ ನಿಧಿಯನ್ನು ನೀಡಲು ಯೋಜಿಸಲಾಗಿದೆ.

ಈ ಯೋಜನೆಯಡಿ ಎಲ್ಲಾ ಚಟುವಟಿಕೆಗಳನ್ನು ನಡೆಸಲು ಕರಾವಳಿಯಲ್ಲಿ ಪ್ರತಿ ಅನುಷ್ಠಾನ ಸಂಸ್ಥೆಗೆ ಗರಿಷ್ಟ ರೂ.2.00 ಲಕ್ಷ ಅನುದಾನ ನೀಡಲಾಗುವುದು ಹಾಗೂ ಒಳನಾಡು ಪ್ರದೇಶದಲ್ಲಿ ಪ್ರತಿ ಅನುಷ್ಟಾನ ಸಂಸ್ಥೆಗೆ ಗರಿಷ್ಟ ರೂ.1.00 ಲಕ್ಷ ಅನುದಾನ ನೀಡಲಾಗುವುದು.

## ಜಿಲ್ಲಾ ವಲಯ ಯೋಜನೆಗಳು

### ಕೇಂದ್ರ ಪುರಸ್ಕೃತ ಯೋಜನೆ – ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಮತ್ತು ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳು (2405-00-101-0-54)

ರಾಜ್ಯದಲ್ಲಿ ಒಟ್ಟು 13 ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮತ್ತು ಎರಡು ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಸಣ್ಣ ಕೆರೆಗಳ ಹಾಗೂ ಕೊಳಗಳ ಅಭಿವೃದ್ಧಿಗೆ ಸ್ಥಾಪಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದಲ್ಲಿರುವ ಕೊಳಗಳು, ಸಣ್ಣ ಕೆರೆಗಳು, ತೊರೆದ ನೀರಾವರಿ ಪ್ರದೇಶಗಳಲ್ಲಿ ಮೀನು ಕೃಷಿಯನ್ನು ಕೈಗೊಂಡು ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದಲ್ಲದೆ ಗ್ರಾಮೀಣ ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು. ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಒಳನಾಡು ಮೀನುಗಾರಿಕೆಯಲ್ಲಿ ಹತ್ತು ದಿನಗಳ ತರಬೇತಿ ನೀಡಿ ಅವರಿಗೆ ಕೆರೆಗಳನ್ನು ಗುತ್ತಿಗೆ ನೀಡಲಾಗುವುದು ಮತ್ತು ಅಭಿವೃದ್ಧಿಗೆ ಬೇಕಾದ ಮೀನುಮರಿ, ಗೊಬ್ಬರ ಮತ್ತು ಸಲಕರಣೆಗಳನ್ನು ಕೊಳ್ಳಲು ಸಹಾಯಧನವನ್ನು ನೀಡಲು ಈ ಯೋಜನೆಯಲ್ಲಿ ಅವಕಾಶವಿದೆ. ಈ ಯೋಜನೆಯ ಮುಖ್ಯ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

1) ಆಯ್ಕೆಯಾದ ಫಲಾನುಭವಿಗಳಿಗೆ 10 ದಿನಗಳ ಅವಧಿಗೆ ಮೀನುಗಾರಿಕೆ ಚಟುವಟಿಕೆಗಳಲ್ಲಿ ತರಬೇತಿ ನೀಡುವುದು. ತರಬೇತಿಯ ಅವಧಿಯಲ್ಲಿ ಪ್ರತಿ ಫಲಾನುಭವಿಗಳಿಗೆ ಪ್ರತಿದಿನ

ರೂ.100/–ರಂತೆ ವಿದ್ಯಾರ್ಥಿ ವೇತನ ನೀಡಲಾಗುವುದು ಹಾಗೂ ಪ್ರಯಾಣವೆಚ್ಚ ರೂ.100/–ನ್ನು ನೀಡಲಾಗುವುದು.

2) ತರಬೇತಿ ಪಡೆದ ಫಲಾನುಭವಿಗಳಿಗೆ ಸಣ್ಣ ಕೆರೆಗಳ ಮೀನು ಪಾಶುವಾರು ಹಕ್ಕನ್ನು 3 ರಿಂದ 6 ವರ್ಷ ಅವಧಿಗೆ ಗುತ್ತಿಗೆ ನೀಡಲಾಗುವುದು.
3) ಮೀನು ಕೃಷಿಗೆ ಬೇಕಾದಂತಹ ಆಹಾರ ಗೊಬ್ಬರ, ಔಷಧಿ ಮತ್ತು ಮುಂತಾದ ಸಾಮಗ್ರಿಗಳಿಗೆ ಸಹಾಯಧನವನ್ನು ನೀಡಲಾಗುವುದು.
4) ಅನವಶ್ಯಕ ಜಲಸಸ್ಯಗಳಿಂದ ಕೂಡಿದಂತಹ ಕೆರೆಗಳಲ್ಲಿ ಜಲಸಸ್ಯಗಳ ನಿರ್ಮೂಲನೆಗೆ ಸಹಾಯಧನ ನೀಡಲಾಗುವುದು.
5) ಫಲಾನುಭವಿಗಳಿಗೆ ತಮ್ಮ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳಗಳನ್ನು ನಿರ್ಮಿಸಲು ಸಹಾಯಧನವನ್ನು ನೀಡಲಾಗುವುದು.
6) ಸಮಗ್ರವಾದ ಮೀನು ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಲು ಕೃಷಿಕರಿಗೆ ಸಹಾಯಧನವನ್ನು ನೀಡಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಉಪ್ಪು ನೀರು ಮೀನು ಕೃಷಿಕರ ಅಭಿವೃದ್ಧಿಯನ್ನು ಸಂಸ್ಥೆಗಳ ಮೂಲಕ ಕರಾವಳಿ ಜಿಲ್ಲೆಗಳ ಉಪ್ಪು ನೀರು ಪ್ರದೇಶಗಳಲ್ಲಿ ಸೀಗಡಿ ಕೃಷಿ ಅಭಿವೃದ್ಧಿಪಡಿಸುವುದು. ಪ್ರತಿ ವರ್ಷ ಉಪ್ಪು ನೀರು ಪ್ರದೇಶದಲ್ಲಿ ಸೀಗಡಿ ಕೃಷಿ ಅಭಿವೃದ್ಧಿಗೊಳಿಸುವ ಗುರಿ ಹೊಂದಿದೆ.

## ಮೀನುಗಾರಿಕೆ ಕಟ್ಟಡಗಳ ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–001–0–72)

ಮೀನುಗಾರಿಕೆ ಇಲಾಖೆಯ ಕಛೇರಿ ಕಟ್ಟಡಗಳನ್ನು ಮತ್ತು ಸಿಬ್ಬಂದಿಗೆ ವಸತಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ. ಹಿನ್ನೀರು ಜೀವರಾಶಿಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮೀನುಗಳ ಪ್ರದರ್ಶನ ಮಾಡಲು ಮತ್ಸ್ಯಾಲಯ ನಿರ್ಮಾಣ ಮತ್ತು ನಿರ್ವಹಣೆ. ಕರಾವಳಿ ಜಿಲ್ಲೆಗಳಲ್ಲಿ ಹಿಡಿದ ಮೀನನ್ನು ಸೂಕ್ತ ಸ್ಥಳಗಳಲ್ಲಿ ಇಳಿಸುವುದು ಮತ್ತು ಕೆಡದಂತೆ ಇತರ ಸ್ಥಳಗಳಿಗೆ ಸಾಗಾಣಿಕೆ ಮಾಡುವ ಉದ್ದೇಶಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

ಈ ಯೋಜನೆಯಡಿಯಲ್ಲಿ ಮೀನುಗಾರಿಕೆ ಇಲಾಖೆ ಕಛೇರಿಗಳ ಕಟ್ಟಡ ನಿರ್ಮಾಣ, ಹಾಲಿ ಇರುವ ಕಟ್ಟಡಗಳ ರಿಪೇರಿ, ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಲ್ಲಿರುವ ಕಛೇರಿ ಕಟ್ಟಡಗಳ ನಿರ್ವಹಣೆ, ತಾಲ್ಲೂಕು ಮಟ್ಟದ ನರ್ಸರಿ ಮತ್ತು ಹೊಸ ಕೊಳಗಳ ನಿರ್ಮಾಣ, ನಿರ್ವಹಣೆ ಇತ್ಯಾದಿ, ಮತ್ಸ್ಯಾಲಯ ನಿರ್ಮಾಣ, ನಿರ್ವಹಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಉದ್ಯಮಕ್ಕೆ ಅವಶ್ಯಕವಾಗಿರುವ ಮೀನುಗಾರಿಕೆ ದೋಣಿಗಳಿಗೆ ಹಿಡಿದ ಮೀನನ್ನು ಇಳಿಸಲು, ದೋಣಿಗಳನ್ನು ನಿಲ್ಲಿಸಲು ಮೀನು ಬಲೆ ಕಟ್ಟುವ ಶೆಡ್ಡುಗಳನ್ನು ನಿರ್ಮಿಸಲು ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

## ವಸ್ತುಪ್ರದರ್ಶನ ಮತ್ತು ತರಬೇತಿ (2405–00–800–073)

ಸಾರ್ವಜನಿಕರಿಗೆ ಮೀನು ಕೃಷಿ ಬಗ್ಗೆ ತಿಳುವಳಿಕೆ ನೀಡಲು ಪ್ರದರ್ಶನ ಮತ್ತು ತರಬೇತಿ ನೀಡಲಾಗುವುದು. ಮೀನು ಕೃಷಿ ಒಂದು ಲಾಭದಾಯಕ ಉದ್ಯಮವೆಂದು ಅರಿವು ಮೂಡಿಸಿ ಮೀನು ಬೇಸಾಯದಲ್ಲಿ ತೊಡಗಿಸಲು ಪ್ರದರ್ಶನಗಳು ಮತ್ತು ಮಾಹಿತಿ

ಕರಪತ್ರಗಳನ್ನು ತಯಾರಿಸಿ ಸಾರ್ವಜನಿಕರಿಗೆ ವಿತರಿಸುವುದು. ತರಬೇತಿ ನೀಡುವುದರಿಂದ ಸಾರ್ವಜನಿಕರು ಮೀನುಕೃಷಿಯನ್ನು ಕೈಗೊಳ್ಳಲು ಅನುಕೂಲವಾಗುವುದು.

ತಾಲ್ಲೂಕು ಹಾಗು ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗುವ ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ತಗಲುವ ವೆಚ್ಚ ಮತ್ತು ಇತರ ವ್ಯವಸ್ಥೆಗಳಿಗೆ ಜಿಲ್ಲಾ ಪಂಚಾಯತ್‌ನಿಂದ ಮಂಜೂರಾತಿ ಪಡೆದು ವ್ಯವಸ್ಥೆ ಮಾಡಲಾಗುವುದು.

## ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (2405–00–101–0–72)

### ಅ) ಒಳನಾಡು ಮೀನುಗಾರಿಕೆ

ಮೀನು ಕೃಷಿಕರು ಮೀನುಗಾರಿಕೆ ಉದ್ಯಮವನ್ನು ಕೈಗೊಳ್ಳುವಂತೆ ಸಹಾಯಧನ ನೀಡಿ ಪ್ರೋತ್ಸಾಹಿಸುವುದು ಈ ಯೋಜನೆಯ ಉದ್ದೇಶ. ಇದರಡಿ ಈ ಕೆಳಗಿನ ಯೋಜನೆಗಳಿಗೆ ಸಹಾಯಧನ ಒದಗಿಸಲಾಗುವುದು.

1) ಮೀನುಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ
2) ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ
3) ಹುಲ್ಲುಗೆಂಡೆ ಮೀನುಮರಿಗಳ ಖರೀದಿಗೆ ಸಹಾಯಧನ
4) ಬಾವಿ ಮತ್ತು ಹೊಂಡಗಳಲ್ಲಿ ಮೀನುಕೃಷಿಗೆ ಸಹಾಯ
5) ಜೌಗು ಮತ್ತು ಚೌಳು ಪ್ರದೇಶದಲ್ಲಿ ಮೀನುಕೃಷಿ ಕೊಳ ನಿರ್ಮಾಣಕ್ಕೆ ಸಹಾಯ
6) ಮೀನುಮರಿ ಉತ್ಪಾದನೆ ಪಾಲನೆ ಮತ್ತು ವಿತರಣೆ ಯೋಜನೆ

ಈ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಸಹಾಯಧನ ನೀಡುವುದು, ಒಂದು ಎಕರೆ ಮೀನು ಕೃಷಿ ಕೊಳದಲ್ಲಿ ಸಿಹಿನೀರು ಸೀಗಡಿ ವ್ಯವಸಾಯ ಮಾಡಲು ಫಲಾನುಭವಿಗಳಿಗೆ ಶೇ.50ರಷ್ಟು ಗರಿಷ್ಟ ರೂ.20,000–00ಗಳ ಸಹಾಯಧನ ನೀಡುವುದು, ಬಾವಿ ಮತ್ತು ಸ್ವಂತ ಕೊಳಗಳಿರುವ ರೈತರಿಗೆ ಮೀನು ಕೃಷಿಯನ್ನು ಕೈಗೊಳ್ಳಲು 250 ಸಾಮಾನ್ಯ ಗೆಂಡೆ ಮೀನು ಮರಿಗಳ ಸರಬರಾಜು ಮಾಡುವುದು. ಜಲ ಸಸ್ಯಗಳಿರುವ ಕೆರೆಗಳಲ್ಲಿ ಹುಲ್ಲುಗೆಂಡೆ ಮೀನು ಮರಿಗಳ ದಾಸ್ತಾನಿಗೆ ಪ್ರತಿ ಫಲಾನುಭವಿಗೆ ಗರಿಷ್ಟ ರೂ.5,000/– ಮೌಲ್ಯದ ಮೀನುಮರಿಗಳನ್ನು ಪ್ರತಿ ಶತ 50 ರ ಸಹಾಯಧನ ಮಂಜೂರು ಮಾಡಲಾಗುವುದು. ಮೀನು ಕೃಷಿಕರು ಅವರ ಸ್ವಂತ ಜಮೀನಿನಲ್ಲಿ ಒಂದು ಎಕರೆ ಪ್ರದೇಶದಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಮಾಡುವ ಫಲಾನುಭವಿಗೆ ಶೇಕಡ 25ರಷ್ಟು ಗರಿಷ್ಟ ರೂ.10.000/– ಗಳ ಸಹಾಯಧನ ನೀಡಲಾಗುವುದು.

### ಆ) ಚೌಗು/ಚೌಳು ಪ್ರದೇಶದಲ್ಲಿ ಮೀನುಗಾರಿಕೆ ಅಭಿವೃದ್ಧಿ

ನೀರಾವರಿ ಅಚ್ಚುಕಟ್ಟು ಪ್ರವೇಶಗಳಲ್ಲಿ ಭೂಮಿಯು ನಿರಂತರ ನೀರಾವರಿಯಿಂದ ಚೌಗು/ಚೌಳು ಪ್ರದೇಶವಾಗಿ ಪರಿವರ್ತನೆಗೊಂಡು ಸದರಿ ಭೂಮಿಯು ಕೃಷಿಗೆ ಯೋಗ್ಯವಾಗಿರುವುದಿಲ್ಲ. ಸದರಿ ಭೂಮಿಯಲ್ಲಿ ಮೀನು ಕೊಳಗಳನ್ನು ನಿರ್ಮಿಸಿ ಮಣ್ಣು ಮತ್ತು ನೀರಿನ ಗುಣಮಟ್ಟವನ್ನು ಸರಿಪಡಿಸಿ ಮೀನು ಪಾಲನೆಯನ್ನು ಪ್ರೋತ್ಸಾಹಿಸಲು ಸಹಾಯಧನವನ್ನು ನೀಡಲಾಗುವುದು.

ಪ್ರತಿ ಎಕರೆ ಜೌಗು/ಚೌಳು ಪ್ರದೇಶದಲ್ಲಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಮೂಲ ಬಂಡವಾಳ ಮತ್ತು ಆವರ್ತಕ ವೆಚ್ಚದ 1/3 ಭಾಗ ಅಥವಾ ರೂ.30,000/- ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಸಹಾಯಧನವಾಗಿ ನೀಡಲಾಗುವುದು. ಈ ಸಹಾಯಧನದಲ್ಲಿ ಬಂಡವಾಳ ವೆಚ್ಚದ ಮೇಲೆ ಗರಿಷ್ಟ ರೂ.25,000/- ಹಾಗೂ ಹೂಡಿಕೆ ವೆಚ್ಚದ ಮೇಲೆ ಗರಿಷ್ಟ ರೂ.5000/- ಒಟ್ಟು ರೂ.30,000/- ಗಳ ಸಹಾಯಧನ ನೀಡಲಾಗುವುದು.

**ಇ) ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ**

ಮೀನು ಕೃಷಿಗೆ ಅಗತ್ಯವಾದ ಮೀನುಮರಿಗಳನ್ನು ಉತ್ಪಾದಿಸಿ ಸಾಕಾಣಿಕೆ ಮಾಡಲು ಪಾಲನಾ ಕೊಳಗಳನ್ನು ನಿರ್ಮಾಣ ಮಾಡುವುದು. ಒಳನಾಡು ಜಲಸಂಪನ್ಮೂಲಗಳನ್ನು ವಿವಿಧ ಜಾತಿಯ ತಳಿ ಮೀನುಮರಿಗಳಿಂದ ಬಿತ್ತನೆ ಮಾಡಿ ಮೀನು ಉತ್ಪಾದನೆ ಹೆಚ್ಚಿಸಿ ಪೌಷ್ಠಿಕ ಆಹಾರವನ್ನು ಸಾರ್ವಜನಿಕರಿಗೆ ಒದಗಿಸುವುದು ಮತ್ತು ಮೀನುಗಾರರು ಮೀನು ಶಿಕಾರಿ ಮಾಡಿ ದಿನನಿತ್ಯದ ಜೀವನವನ್ನು ಸಾಧಿಸುವುದಲ್ಲದೆ ಅವರ ಆರ್ಥಿಕ ಮಟ್ಟವನ್ನು ಸುಧಾರಿಸುವುದು. ಮೀನುಮರಿಗಳ ಉತ್ಪಾದನೆ,ಪಾಲನೆ,ವಿತರಣೆ, ಮೀನುಮರಿಗಳನ್ನು ಖರೀದಿಸುವುದು.

ಮೀನುಮರಿ ಉತ್ಪಾದನೆ, ಸಾಕಾಣಿಕೆಗೆ ಬೇಕಾಗುವ ಆಹಾರ, ಸಲಕರಣೆಗಳನ್ನು ಪಡೆಯಲು, ಉತ್ಪಾದನಾ ಕೇಂದ್ರಗಳಿಂದ ಶೇಖರಣಾ ಸ್ಥಳಗಳಿಗೆ ಸಾಗಿಸುವ ಮತ್ತು ಕೇಂದ್ರ ಕಛೇರಿಯ ವಾಹನಗಳ ನಿರ್ವಹಣೆ, ಮೀನುಗಾರಿಕೆ ಉತ್ಪಾದನಾ ಕೇಂದ್ರಗಳಿಗೆ ವಾಹನ ಖರೀದಿ ಮತ್ತು ನಿರ್ವಹಣೆ ಖಾಸಗಿಯವರಿಂದ ಮೀನುಮರಿ ಖರೀದಿ ಮುಂತಾದ ವೆಚ್ಚವನ್ನು ಭರಿಸಲಾಗುವುದು. ಜಲಾಶಯ ಮತ್ತು ಕೊಳದ ಮೀನುಗಾರಿಕೆಯನ್ನು ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಿ ವೆಚ್ಚವನ್ನು ಭರಿಸಲಾಗುವುದು. ದೋಷಪೂರಿತ ಕೊಳಗಳ ದುರಸ್ಥಿ ನಿರ್ವಹಣೆ ಮತ್ತು ಉಪಯೋಗದಲ್ಲಿರುವ ಕೊಳಗಳ ವಾರ್ಷಿಕ ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ. ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರವಿದ್ದಲ್ಲಿ ಮೀನುಮರಿ ಉತ್ಪತ್ತಿ, ಪಾಲನೆ ಮಾಡಿ ಇಲಾಖಾ ನಿಗದಿತ ದರದಲ್ಲಿ ಮೀನುಮರಿಗಳನ್ನು ಸರಬರಾಜು ಮಾಡುವುದು.

**ಮೀನು ಮಾರಾಟ ಮತ್ತು ಮತ್ಸ್ಯವಾಹಿನಿಗೆ ಸಹಾಯ (2405-00-105-0-08)**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ರೀತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಬೈಸಿಕಲ್ಲುಗಳನ್ನು ಖರೀದಿಸಲು ಸಹಾಯಧನ ನೀಡುವುದು, ಇತ್ತೀಚಿನ ದಿನಗಳಲ್ಲಿ ಮೀನು ಮಾರಾಟ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತಿರುವುದರಿಂದ, ತ್ವರಿತವಾಗಿ ತಾಜಾ ಮೀನನ್ನು ಸಾರ್ವಜನಿಕರಿಗೆ ತಲುಪಿಸಲು ಮೊಪೆಡ್ ವಾಹನವನ್ನು ಒದಗಿಸುವುದು ಹಾಗೂ ಮತ್ಸ್ಯವಾಹಿನಿ ಯೋಜನೆಯಡಿ ಮೀನನ್ನು ಹಿಡಿದ ತಕ್ಷಣ ಇಳಿದಾಣ ಕೇಂದ್ರಗಳಿಂದ ಮಾರಾಟ ಕೇಂದ್ರಗಳಿಗೆ ಆರೋಗ್ಯಕರ ರೀತಿಯಲ್ಲಿ ಸಾಗಿಸಲು ಮೂರು ಅಥವಾ ನಾಲ್ಕು ಫಲಾನುಭವಿಗಳ ಗುಂಪಿಗೆ ಒಂದು ತ್ರಿಚಕ್ರ ವಾಹನ ಖರೀದಿಸಲು ಸಹಾಯಧನ ನೀಡುವುದು ಈ ಯೋಜನೆಯ ಉದ್ದೇವಾಗಿರುತ್ತದೆ, ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ಘಟಕ | ಘಟಕ ವೆಚ್ಚ ರೂ. | ಸಹಾಯಧನ |
|---|---|---|---|
| 1. | ಸೈಕಲ್‌ನೊಂದಿಗೆ ಶಾಖನಿರೋಧಕ ಪೆಟ್ಟಿಗೆ | 4000 | ಘಟಕ ವೆಚ್ಚದ ಶೇ.50ರಷ್ಟು ಗರಿಷ್ಟ ರೂ.2000/– |
| 2. | ದ್ವಿಚಕ್ರವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ(ಮೊಪೆಡ್) | 40,000 | ಘಟಕ ವೆಚ್ಚದ ಶೇ.25ರಷ್ಟು ಗರಿಷ್ಟ ರೂ.10000/– |
| 3. | ತ್ರಿಚಕ್ರ ವಾಹನ | 120000 | ಘಟಕ ವೆಚ್ಚದ ಶೇ.25ರಷ್ಟು ಗರಿಷ್ಟ ರೂ.30000 |
| 4. | ನಾಲ್ಕು ಚಕ್ರದ ವಾಹನ | 200000 | ಘಟಕ ವೆಚ್ಚದ ಶೇ.25ರಷ್ಟು ಗರಿಷ್ಟ ರೂ.35000/– |

## ಭಾರತ ಸರ್ಕಾರದ ಯೊಜನೆಗಳು

### ಒಳನಾಡು ಜಲಕೃಷಿ ಅಭಿವೃದ್ಧಿ (ಮೀನುಕೃಷಿಕರ ಅಭಿವೃದ್ಧಿ ಸಂಸ್ಥೆಗಳು)

| ಯೋಜನೆ | ಆರ್ಥಿಕ ಸಹಾಯ |
|---|---|
| 1. ಮೀನುಕೃಷಿ ಕೊಳ ನಿರ್ಮಾಣಕ್ಕೆ ಸಹಾಯ | ಘಟಕ ವೆಚ್ಚ: ಪ್ರತಿ ಹೆಕ್ಟೇರ್ ಜಲಾವೃತ ಪ್ರದೇಶ ಅಭಿವೃದ್ಧಿಗೆ ರೂ.3.00 ಲಕ್ಷ.<br>ಸಹಾಯಧನ: ಘಟಕ ವೆಚ್ಚದ ಪ್ರತಿಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.60000ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು.<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚದ ಪ್ರತಿಶತ 25ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.75000ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. |
| 2. ಮೀನುಕೃಷಿ ಕೊಳ ನವೀಕರಣಕ್ಕೆ ಸಹಾಯ | ಘಟಕ ವೆಚ್ಚ: ಪ್ರತಿ ಹೆಕ್ಟೇರ್‌ಗೆ ರೂ.75000<br>ಸಹಾಯಧನ : ಘಟಕ ವೆಚ್ಚ ಪ್ರತಿಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.15000ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಘಟಕವೆಚ್ಚದ ಪ್ರತಿಶತ 25 ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 18750 ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. |
| 3. ಮೀನು/ಸೀಗಡಿ ಕೃಷಿ ಹೂಡಿಕೆಗಳಿಗೆ ಸಹಾಯ | ಅ)ಮೀನುಕೃಷಿ:<br>ಘಟಕ ವೆಚ್ಚ : ಪ್ರತಿ ಹೆಕ್ಟೇರ್‌ಗೆ ರೂ 50000<br>ಸಹಾಯಧನ : ಘಟಕ ವೆಚ್ಚದ ಪ್ರತಿಶತ 20ರಷ್ಟು |

| | |
|---|---|
| | ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.10000 ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚದ ಪ್ರತಿಶತ 25ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 12500 ಕ್ಕೆ ಸೀಮಿತಗೋಳಿಸಿ ಸಹಾಯಧನ ನೀಡಲಾಗುವುದು.<br>ಆ)ಸಿಹಿನೀರು ಸೀಗಡಿ ಕೃಷಿ:<br>ಘಟಕ ವೆಚ್ಚ: ಪ್ರತಿ ಹೆಕ್ಟೇರ್‌ಗೆ ರೂ 1.80 ಲಕ್ಷ<br>ಸಹಾಯಧನ : ಘಟಕವೆಚ್ಚದ ಪ್ರತಿಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.36000 ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು.ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚದ ಪ್ರತಿಶತ 25ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 45000ಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. |
| 4. ಒಳನಾಡು ಮೀನುಮರಿ ಉತ್ಪಾದನಾ ಹ್ಯಾಚರಿ ಸ್ಥಾಪನೆಗೆ ಸಹಾಯ | ಘಟಕ ವೆಚ್ಚ: ವಾರ್ಷಿಕ 1ಕೋಟಿ ಫ್ರೈ ಮೀನುಮರಿ ಉತ್ಪಾದನಾ ಸಾಮರ್ಥ್ಯದ ಘಟಕಕ್ಕೆ ರೂ.12.00 ಲಕ್ಷ<br>ಸಹಾಯಧನ:ಘಟಕ ವೆಚ್ಚದ ಪ್ರತಿಶತ 10ರಷ್ಟು ಆದರೆ ಪ್ರತಿ ಘಟಕಕ್ಕೆ ಗರಿಷ್ಟ ರೂ.12.00 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡಲಾಗುವುದು. |
| 5. ಮೀನು ಆಹಾರ ತಯಾರಿಕಾ ಘಟಕಗಳ ಸ್ಥಾಪನೆಗೆ ಸಹಾಯ | ಸಣ್ಣ ಘಟಕಗಳು:<br>ಘಟಕ ವೆಚ್ಚ:ವಾರ್ಷಿಕ 1.2 ಕ್ವಿಂಟಾಲ್ ಉತ್ಪಾದನಾ ಸಾಮರ್ಥ್ಯದ ಘಟಕಕ್ಕೆ ರೂ 7.50 ಲಕ್ಷ<br>ಸಹಾಯಧನ:ಘಟಕ ವೆಚ್ಚದ ಪ್ರತಿಶತ 20ರಷ್ಟು ಆದರೆ ಪ್ರತಿ ಘಟಕಕ್ಕೆ ಗರಿಷ್ಟ ರೂ.1.50 ಲಕ್ಷ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. |
| 6. ಟ್ರೌಟ್/ಸಿಹಿನೀರು ಸೀಗಡಿ ಹ್ಯಾಚರಿಗಳ ಸ್ಥಾಪನೆಗೆ ಸಹಾಯ | ಘಟಕ ವೆಚ್ಚ: ವಾರ್ಷಿಕ ಕನಿಷ್ಟ 2.5 ಕೋಟಿ ಪಿಎಲ್ ಉತ್ಪಾದನಾ ಸಾಮರ್ಥ್ಯದ ಘಟಕ ರೂ 30.00 ಲಕ್ಷ.ಇದು ರಾಜ್ಯಗಳಿಗೆ ಒಂದು ಬಾರಿ ಧನ ಸಹಾಯವನ್ನಾಗಿ ನೀಡಲಾಗುವುದು.<br>ಘಟಕ ವೆಚ್ಚ: ವಾರ್ಷಿಕ 0.50 ರಿಂದ 1.0 ಕೋಟಿ ಪಿಎಲ್ ಉತ್ಪಾದನಾ ಸಾಮರ್ಥ್ಯದ ಘಟಕಕ್ಕೆ ರೂ.12.00 ಲಕ್ಷ<br>ಸಹಾಯಧನ: ಘಟಕ ವೆಚ್ಚದ ಪ್ರತಿಶತ 20ರಷ್ಟು ಆದರೆ ಪ್ರತಿ ಘಟಕಕ್ಕೆ ಗರಿಷ್ಟ ರೂ.2.40 ಲಕ್ಷ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. ಇದನ್ನು |

| | |
|---|---|
| | ಉದ್ಯಮಿಗಳಿಗೆ ನೀಡಲಾಗುವುದು. |
| 7. ಮೀನುಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಮಣ್ಣು ಮತ್ತು ನೀರು ಪರೀಕ್ಷೆ ಮಾಡುವ ಕಿಟ್ ಖರೀದಿಸಲು ಸಹಾಯ | ಘಟಕ ವೆಚ್ಚ: ಪ್ರತಿ ಕಿಟ್‌ಗೆ ರೂ 40.000ರಂತೆ ಒಂದು ಬಾರಿ ಪ್ರತಿ ಮೀನುಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಸಹಾಯಾನುದಾನವಾಗಿ ನೀಡಲಾಗುವುದು. |
| 8. ಅಲಂಕಾರಿಕ ಮೀನುಮರಿಗಳ ಉತ್ಪಾದನೆ ಒಳಗೊಂಡಂತೆ ಸಮಗ್ರ ಘಟಕಗಳ ಸ್ಥಾಪನೆಗೆ ಸಹಾಯ | ಘಟಕ ವೆಚ್ಚ: ವಾರ್ಷಿಕ 0.5–1.0 ಕೋಟಿ ಮರಿ ಉತ್ಪಾದನಾ ಸಾಮರ್ಥ್ಯದ ಘಟಕಕ್ಕೆ ರೂ.15.00 ಲಕ್ಷ. ಸಹಾಯಧನ: ಘಟಕ ವೆಚ್ಚದ ಪ್ರತಿಶತ 10ರಷ್ಟು ಆದರೆ ಪ್ರತಿ ಘಟಕಕ್ಕೆ ಗರಿಷ್ಟ ರೂ.1.50 ಲಕ್ಷ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. |
| 9. ಅಲಂಕಾರಿಕ ತಳಿ ಬ್ರೀಡರ್ ಸಂಗ್ರಹಣಾ ಘಟಕ ಸ್ಥಾಪನೆಗೆ ಸಹಾಯ | ರಾಜ್ಯ ಸರ್ಕಾರಕ್ಕೆ ಈ ಸಹಾಯಾನುದಾನವನ್ನು ಬಿಡುಗಡೆಗೊಳಿಸಬಹುದಾಗಿದೆ.<br>ಘಟಕ ವೆಚ್ಚ: ರೂ.25 ಲಕ್ಷ. ಇದರಲ್ಲಿ ಫಾರಂ ನಿರ್ಮಾಣ, ಸಾಗಾಟ ವ್ಯವಸ್ಥೆ ಕಲ್ಪಿಸಲು ಅವಾಕಾಶ ಕಲ್ಪಿಸಿದೆ. |
| 10. ಅಲಂಕಾರಿಕ ಮೀನು/ಮೀನು ಮರಿ ಪ್ರಮಾಣೀಕರಣ ಘಟಕ ಸ್ಥಾಪನೆಗೆ ಸಹಾಯ | ರಾಜ್ಯ ಸರ್ಕಾರಕ್ಕೆ ಈ ಸಹಾಯಾನುದಾನವನ್ನು ಬಿಡುಗಡೆಗೊಳಿಸಬಹುದಾಗಿದೆ.<br>ಘಟಕ ವೆಚ್ಚ: ರೂ. 25 ಲಕ್ಷ. ಇದರಲ್ಲಿ ಫಾರಂ ನಿರ್ಮಾಣ, ರೋಗ ಪತೆ ಹಚ್ಚಲು ಲ್ಯಾಬ್ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಿದೆ. |

**ಜೌಗು ಪ್ರದೇಶಗಳಲ್ಲಿ ಮೀನುಕೃಷಿ ಅಭಿವೃದ್ಧಿ**

| ಕ್ರ.ಸಂ. | ಯೋಜನೆ | ಆರ್ಥಿಕ ಸಹಾಯ |
|---|---|---|
| 1. | ಜೌಗು ಪ್ರದೇಶಗಳಲ್ಲಿ ಮೀನುಕೃಷಿ ಅಭಿವೃದ್ಧಿ | ಘಟಕ ವೆಚ್ಚ: ಪ್ರತಿ ಹೆ. ಜಲಾವೃತ ಪ್ರದೇಶ ಅಭಿವೃದ್ಧಿಗೆ ರೂ 2.00 ಲಕ್ಷ ಸಹಾಯಧನ: ಘಟಕ ವೆಚ್ಚದ ಪ್ರತಿ ಶತ 20ರಷ್ಟು ಆದರೆ ಹೆಕ್ಟೇರ್‌ಗೆ ಗರಿಷ್ಟ ರೂ.40000 ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. |
| 2. | ಹೂಡಿಕೆಗಳಿಗೆ ಸಹಾಯ | ಅವಕಾಶವಿಲ್ಲ |

**ಒಳನಾಡು ಮೀನುಗಾರಿಕೆ– ಜಲಾಶಯ ಮತ್ತು ನದಿ ಮೀನುಗಾರಿಕೆ**

| ಕ್ರ.ಸಂ. | ಯೋಜನೆ | ಆರ್ಥಿಕ ಸಹಾಯ |
|---|---|---|

| | | |
|---|---|---|
| 1. | ಮೀನುಮರಿ ಪಾಲನಾ ಕೇಂದ್ರ ನಿರ್ಮಾಕ್ಕೆ ಸಹಾಯ<br><br>ಕೇಜ್/ಪೆನ್ ನಿರ್ಮಾಣ ಹೂಡಿಕೆಗಳೊಂದಿಗೆ | ಘಟಕ ವೆಚ್ಚ:ಪ್ರತಿ ಹೆಕ್ಟೇರ್‌ಗೆ ರೂ.3.00 ಲಕ್ಷ ಸಹಾಯಧನ:ಘಟಕ ವೆಚ್ಚದ ಪ್ರತಿ ಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.20000 ಮಿತಿಗೊಳಪಟ್ಟು ಫಲಾನುಭವಿ/ರಾಜ್ಯ/ಫಿಶ್ ಕಾಪೆಡ್ ಗೆ ಸಹಾಯಧನ ನೀಡಲಾಗುವುದು.<br>ಘಟಕ ವೆಚ್ಚ: ರೂ 25000<br>ಸಹಾಯಧನ: ಘಟಕ ವೆಚ್ಚದ ಪ್ರತಿಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.5000 ಮಿತಿಗೊಳಪಟ್ಟು ಫಲಾನುಭವಿ/ರಾಜ್ಯ/ಫಿಶ್ ಕಾಪೆಡ್‌ಗೆ ಸಹಾಯಧನ ನೀಡಲಾಗುವುದು. |
| 2. | ಹೂಡಿಕೆಗಳಿಗೆ(ಮೀನುಮರಿ, ಆಹಾರ,ಗೊಬ್ಬರ ರೋಗ ನಿಯಂತ್ರಣ ಇತ್ಯಾದಿ)ಸಹಾಯ | ಘಟಕ ವೆಚ್ಚ: ಪ್ರತಿ ಹೆಕ್ಟೇರ್‌ಗೆ ರೂ 30000<br>ಸಹಾಯಧನ: ಘಟಕ ವೆಚ್ಚದ ಪ್ರತಿ ಶತ 20ರಷ್ಟು ಆದರೆ ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ.6000 ಮಿತಿಗೊಳಪಟ್ಟು ಫಲಾನುಭವಿ/ರಾಜ್ಯ/ಫಿಶ್‌ಕಾಪೆಡ್‌ಗೆ ಸಹಾಯಧನ ನೀಡಲಾಗುವುದು. |

## ಮೀನುಗಾರಿಕೆ ತರಬೇತಿ ಮತ್ತು ವಿಸ್ತರಣೆ

| **ಕ್ರ.ಸಂ.** | **ಯೋಜನೆ** | **ಆರ್ಥಿಕ ಸಹಾಯ** |
|---|---|---|
| 1. | ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯ | ರೂ.125/ಅಭ್ಯರ್ಥಿ/ದಿನ ಗರಿಷ್ಟ 15 ದಿನಗಳಿಗೆ ರೂ.1875 ಪ್ರಯಾಣ ವೆಚ್ಚ ಮರುಪಾವತಿ(ಆದ ವೆಚ್ಚ ಅಥವಾ ಪ್ರತಿ ಅಭ್ಯರ್ಥಿಗೆ ಗರಿಷ್ಟ ರೂ 500 ವರೆಗೆ) ಗರಿಷ್ಟ ಇಬ್ಬರು ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ತಲಾ ರೂ.1000/– ಮತ್ತು ಪ್ರಯಾಣ ವೆಚ್ಚ ಮರುಪಾವತಿ (ಆದ ವೆಚ್ಚ ಅಥವಾ ಪ್ರತಿ ಅಭ್ಯರ್ಥಿಗೆ ಗರಿಷ್ಟ ರೂ.1000 ವರೆಗೆ) |
| 2. | ಮೀನುಕೃಷಿಕರ ತರಬೇತಿ ಕೇಂದ್ರ ಸ್ಥಾಪನೆಗೆ ಸಹಾಯ | ಮೀನುಕೃಷಿಕರಿಗೆ ಎರಡು ತರಬೇತಿ ಮತ್ತು ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯಗಳಿಗೆ ಗರಿಷ್ಟ 60.00 ಲಕ್ಷ ಧನ ಸಹಾಯವನ್ನು ಬಿಡುಗಡೆಗೊಳಿಸಲಾಗುವುದು.ಇದಕ್ಕೆ ಅಗತ್ಯ ಜಮೀನು ಮತ್ತು ಕೇಂದ್ರಗಳನ್ನು ನಿರ್ವಹಣಾ |

| | | |
|---|---|---|
| | | ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸತಕ್ಕದ್ದು. |
| 3. | ಅ)ಕಿರುಹೊತ್ತಿಗೆಗಳ ಪ್ರಕಟಣೆಗೆ ಸಹಾಯ<br><br>ಆ)ತರಬೇತಿ ಕೈಪಿಡಿಗಳ ಪ್ರಕಟಣೆಗೆ ಸಹಾಯ | 500ಕಿರು ಹೊತ್ತಿಗೆಗಳ ಮುದ್ರಣಕ್ಕೆ ರಾಜ್ಯಗಳಿಗೆ ರೂ.50000 ಧನ ಸಹಾಯ ಬಿಡುಗಡೆ ಹಾಗೂ ಕಿರುಹೊತ್ತಿಗೆಯ ಲೇಖಕರಿಗೆ ರೂ 15000 ಗೌರವಧನ ನೀಡಬಹುದಾಗಿದೆ.<br>500ಕಿರು ಹೊತ್ತಿಗೆಗಳ ಮುದ್ರಣಕ್ಕೆ ರಾಜ್ಯಗಳಿಗೆ ರೂ.20000 ಧನ ಸಹಾಯ ಬಿಡುಗಡೆ ಹಾಗೂ ಕಿರುಹೊತ್ತಿಗೆಯ ಲೇಖಕರಿಗೆ ರೂ.5000 ಗೌರವ ಧನ ನೀಡಬಹುದಾಗಿದೆ. |
| 4. | ಇ) ಕಾರ್ಯಾಗಾರ, ವಿಚಾರಗೋಷ್ಠಿ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಮೌಲ್ಯಮಾಪನಾ ಅಧ್ಯಯನ ಕೈಗೊಳ್ಳಲು ಸಹಾಯ | ಕಾರ್ಯಾಗಾರ, ವಿಚಾರಗೋಷ್ಠಿ, ವಿಚಾರ ಸಂಕಿರಣಗಳನ್ನು ಏರ್ಪಡಿಸಲು, ರಾಜ್ಯ ಸರ್ಕಾರಕ್ಕೆ ರೂ.50000ವರೆಗೆ ಧನಸಹಾಯ ಬಿಡುಗಡೆಗೊಳಿಸಲಾಗುವುದು.ಮೌಲ್ಯಮಾಪನಾ ಅಧ್ಯಯನ ಕೈಗೊಳ್ಳಲು ರೂ.4.00 ಲಕ್ಷಗಳವರೆಗೆ ನೀಡಲಾಗುವುದು. |

## ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ನೆರವಿನ ಯೋಜನೆಗಳು

### ಕೆರೆ ಮತ್ತು ಕೊಳಗಳಲ್ಲಿ ತೀವ್ರ ಜಲಕೃಷಿ

| **ಕ್ರ ಸಂ.** | **ಚಟುವಟಿಕೆ** | **ಅರ್ಹ ಫಲಾನುಭವಿಗಳು** | **ಆರ್ಥಿಕ ಸಹಾಯ** | **ಅಗತ್ಯ ದಾಖಲಾತಿ,ನಮೂನೆಗಳು** |
|---|---|---|---|---|
| 1. | ಕೊಳ ಅಥವಾ ಹೊಂಡಗಳ ನವೀಕರಣ | 1.ರಾಜ್ಯ ಮೀನುಗಾರಿಕೆ ಇಲಾಖೆಗಳು<br>2.ಹೊಸ ಕೊಳ ನಿರ್ಮಿಸಲಿಚ್ಛಿಸುವ ಮೀನುಕೃಷಿಕರು(ರಾಜ್ಯ ಮೀನುಗಾರಿಕೆ ಇಲಾಖಾ ಮುಖಾಂತರ)<br>3.ಕೊಳ ಅಥವಾ ಹೊಂಡಗಳನ್ನು ಹೊಂದಿರುವ ಮೀನುಕೃಷಿಕರು(ರಾಜ್ಯ ಮೀನುಗಾರಿಕೆ | * ಘಟಕ ವೆಚ್ಚ ರೂ 60000 ರ ಪ್ರತಿಶತ 20ರಷ್ಟು | ಭರ್ತಿ ಮಾಡಿದ ನಮೂನೆ (ಫಾರಂ-1ಎ-1) ಯೊಂದಿಗೆ ಜಮೀನು ಮಾಲೀಕತ್ವ ಪತ್ರ ಅಥವಾ ಕನಿಷ್ಟ 5 ವರ್ಷಗಳ ಗುತ್ತಿಗೆ ಪಡೆದ ಕರಾರು ಪತ್ರ,ಮತ್ತು ಸಾಲ ನೀಡಲು ಒಪ್ಪಿ ಬ್ಯಾಂಕ್ ನೀಡಿರುವ ಪತ್ರಗಳನ್ನು ಮೀನುಗಾರಿಕೆ ಇಲಾಖೆ ಮುಖಾಂತರ ಸಲ್ಲಿಸಬೇಕು. |

| | | | | |
|---|---|---|---|---|
| | | ಇಲಾಖಾ ಮುಖಾಂತರ) | | |
| 2. | ಸ್ವಂತ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಾಣ | ಮೇಲಿನಂತೆ | ಘಟಕ ವೆಚ್ಚ ರೂ 2.00 ಲಕ್ಷದ ಪ್ರತಿಶತ 20 ರಷ್ಟು ಪ.ಜಾ. ಮತ್ತು ಪ.ಪಂ. ದವರಿಗೆ ಮತ್ತು ಈಶಾನ್ಯ ರಾಜ್ಯಗಳಿಗೆ ಪ್ರತಿಶತ 25ರಷ್ಟು | ಮೇಲಿನಂತೆ |
| 3. | ನವೀಕರಿಸಿದ ಅಥವಾ ಹೊಸದಾಗಿ ನಿರ್ಮಿಸಿದ ಕೊಳಗಳಲ್ಲಿ ಮೊದಲನೇ ವರ್ಷದ ಮೀನುಕೃಷಿಗೆ ಅಗತ್ಯ ಹೂಡಿಕೆಗಳು | ಮೇಲಿನಂತೆ | ಘಟಕ ವೆಚ್ಚ: ರೂ. 0.30 ಲಕ್ಷದ ಪ್ರತಿಶತ 20ರಷ್ಟು ಪ.ಜಾ. ಮತ್ತು ಪ.ಪಂ. ದವರಿಗೆ ಮತ್ತು ಈಶಾನ್ಯ ರಾಜ್ಯಗಳಿಗೆ ಪ್ರತಿಶತ 25 ರಷ್ಟು | ಭರ್ತಿ ಮಾಡಿದ ನಮೂನೆ (ಫಾರಂ–1ಎ–1) ಯೊಂದಿಗೆ ಜಮೀನು ಮಾಲೀಕತ್ವ ಪತ್ರ ಅಥವಾ ಕನಿಷ್ಟ 5 ವರ್ಷಗಳ ಗುತ್ತಿಗೆ ಪಡೆದ ಕರಾರು ಪತ್ರ,ಮತ್ತು ಸಾಲ ನೀಡಲು ಒಪ್ಪಿ ಬ್ಯಾಂಕ್ ನೀಡಿರುವ ಪತ್ರಗಳನ್ನು ಮೀನುಗಾರಿಕೆ ಇಲಾಖೆ ಮುಖಾಂತರ ಸಲ್ಲಿಸಬೇಕು. |
| 4. | ಮೀನುಮರಿ ಉತ್ಪಾದನೆ ಸಲುವಾಗಿ ಹ್ಯಾಚರಿಗಳ ಸ್ಥಾಪನೆ | ಹ್ಯಾಚರಿಗಳ ನಿರ್ವಹಣೆಯಲ್ಲಿ ತರಬೇತಿ ಪಡೆದ ಪ್ರಗತಿಪರ ಮೀನುಕೃಷಿಕರು/ಉದ್ದಿಮೆದಾರರು | ಘಟಕ ವೆಚ್ಚ ರೂ. 10.00 ಲಕ್ಷದ ಪ್ರತಿಶತ 20ರಷ್ಟು | ಭರ್ತಿ ಮಾಡಿದ ನಮೂನೆ (ಫಾರಂ–1ಎ–III) ಯೊಂದಿಗೆ ಜಮೀನು ಮಾಲೀಕತ್ವ ಪತ್ರ ಅಥವಾ ಕನಿಷ್ಟ 5 ವರ್ಷಗಳ ಗುತ್ತಿಗೆ ಪಡೆದ ಕರಾರು ಪತ್ರ,ಮತ್ತು ಸಾಲ ನೀಡಲು ಒಪ್ಪಿ ಬ್ಯಾಂಕ್ ನೀಡಿರುವ ಪತ್ರಗಳನ್ನು ಮೀನುಗಾರಿಕೆ ಇಲಾಖೆ ಮುಖಾಂತರ ಸಲ್ಲಿಸಬೇಕು. |
| 5. | ಮೀನುಮರಿ ಉತ್ಪಾದನೆ ಪಾಲನೆ ಕೇಂದ್ರಗಳ ನವೀಕರಣ | ಮೀನುಮರಿ ಪಾಲನಾ ಕೇಂದ್ರಗಳನ್ನು ಹೊಂದಿದ್ದು,ನವೀಕರಿಸಲಿಚ್ಚಿಸುವ ಮೀನುಕೃಷಿಕರು/ಉದ್ದಿಮೆದಾರರು | ಘಟಕ ವೆಚ್ಚ ರೂ. 0.50 ಲಕ್ಷದ ಪ್ರತಿಶತ 20ರಷ್ಟು | ಭರ್ತಿ ಮಾಡಿದ ನಮೂನೆ (ಫಾರಂ–1ಎ–4) ಯೊಂದಿಗೆ ಜಮೀನು ಮಾಲೀಕತ್ವ ಪತ್ರ ಅಥವಾ ಕನಿಷ್ಟ 5 ವರ್ಷಗಳ ಗುತ್ತಿಗೆ ಪಡೆದ ಕರಾರು ಪತ್ರ,ಮತ್ತು ಸಾಲ ನೀಡಲು ಒಪ್ಪಿ ಬ್ಯಾಂಕ್ ನೀಡಿರುವ ಪತ್ರಗಳನ್ನು ಮೀನುಗಾರಿಕೆ ಇಲಾಖೆ ಮುಖಾಂತರ ಸಲ್ಲಿಸಬೇಕು. |
| 6. | ಮೀನುಮರಿ ಪಾಲನಾ | ಮೀನುಮರಿ ಪಾಲನಾ | ಘಟಕ ವೆಚ್ಚ ರೂ | ಭರ್ತಿ ಮಾಡಿದ ನಮೂನೆ |

| | | | | |
|---|---|---|---|---|
| | ಕೇಂದ್ರಗಳ ನಿರ್ಮಾಣ | ಕೆಂದ್ರಗಳನ್ನು ನಿರ್ಮಿಸಲಿಚ್ಚಿಸುವ ಮೀನುಕೃಷಿಕರು/ಉದ್ದಿಮೆದಾರರು | 3.00 ಲಕ್ಷದ ಪ್ರತಿಶತ 20ರಷ್ಟು ಪ.ಜಾ. ಮತ್ತು ಪ.ಪಂ. ದವರಿಗೆ ಮತ್ತು ಈಶಾನ್ಯ ರಾಜ್ಯಗಳಿಗೆ ಪ್ರತಿಶತ 25ರಷ್ಟು | (ಫಾರಂ–1ಎ–4) ಯೊಂದಿಗೆ ಜಮೀನು ಮಾಲೀಕತ್ವ ಪತ್ರ ಅಥವಾ ಕನಿಷ್ಟ 5 ವರ್ಷಗಳ ಗುತ್ತಿಗೆ ಪಡೆದ ಕರಾರು ಪತ್ರ,ಮತ್ತು ಸಾಲ ನೀಡಲು ಒಪ್ಪಿ ಬ್ಯಾಂಕ್ ನೀಡಿರುವ ಪತ್ರಗಳನ್ನು ಮೀನುಗಾರಿಕೆ ಇಲಾಖೆ ಮುಖಾಂತರ ಸಲ್ಲಿಸಬೇಕು. |

## ಜಲಾಶಯ ಮೀನುಗಾರಿಕೆ

| ಕ್ರ.ಸಂ | ಚಟುವಟಿಕೆ | ಅರ್ಹ ಫಲಾನುಭವಿಗಳು | ಆರ್ಥಿಕ ಸಹಾಯ | ಅಗತ್ಯ ದಾಖಲಾತಿ,ನ ಮೂನೆಗಳು |
|---|---|---|---|---|
| 1. | ಜಲಾಶಯಗಳಲ್ಲಿ 100ಮಿ.ಮೀ.ಗಿಂತಲೂ ಹೆಚ್ಚು ಗಾತ್ರದ ಮೀನುಮರಿಗಳ ಬಿತ್ತನೆ | ರಾಜ್ಯ ಸರ್ಕಾರದ ಮೀನುಗಾರಿಕೆ ಇಲಾಖೆ:ಮೀನುಮರಿ ಬಿತ್ತನೆ ಮಾಡಲಾಗುವ ಅಥವಾ ಟೆಂಡರ್ ಮೊತ್ತದ ಶೇ.25 ಅನ್ನು ರಾ.ಮೀ.ಅ.ಮಂ.ಗೆ ಪಾವತಿಸಬೇಕು. | ಭಾರತದ ದೊಡ್ಡಗೆಂಡೆಗಳು,ಸ್ಥಳೀಯ ಗೆಂಡೆ ಮೀನುಮರಿಗಳು ಮತ್ತು ಹುಲ್ಲಗೆಂಡೆ ಮೀನುಮರಿಗಳನ್ನು (100 ಮಿ.ಮೀ.ಗಿಂತ ಕಡಿಮೆಯಿಲ್ಲದ)ಬಿತ್ತನೆ ಮಾಡಲು ಪ್ರತಿ ಮೀನು ಮರಿಗೆ ರೂ.1 ರಂತೆ ಅನುದಾನ ನೀಡಲಾಗುವುದು. ಬಿತ್ತನೆ ಪ್ರಮಾಣವನ್ನು ಸರಾಸರಿ ಜಲ ವಿಸ್ತೀರ್ಣದ ಆದಾರದಲ್ಲಿ ನಿರ್ಧರಿಸಲಾಗುವುದು. | ಭರ್ತಿ ಮಾಡಿದ ನಮೂನೆ (ಫಾರಂ–ಆರ್.ಎಫ್.ಡಿ–1) |
| 2. | ತರಬೇತಿ ಮತ್ತು ಪ್ರಾತ್ಯಕ್ಷತೆ | ರಾಜ್ಯ ಸರ್ಕಾರದ ಮೀನುಗಾರಿಕೆ ಇಲಾಖೆ | ಜಲಾಶಯವನ್ನವಲಂಬಿಸಿರುವ ಮೀನುಗಾರರು:ಅನುದಾನ,ತೀವ್ರ ಜಲಕೃಷಿ ಮತ್ತು ಹ್ಯಾಚರಿಗಳ ನಿರ್ವಹಣೆ ಕುರಿತು ಮೀನುಕೃಷಿಕರಿಗೆ ತರಬೇತಿಯಲ್ಲಿರುವಂತೆ | ಭರ್ತಿ ಮಾಡಿದ ನಮೂನೆ (ಫಾರಂ–ಆರ್.ಎಫ್.ಡಿ–2) |